ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

ಸಿ ಸಿ ನಂಃ **1761/2022**

ಪಿಡಬ್ಲ್ಯು : 2

ಸಾಕ್ಷಿಯ ಹೆಸರುಃ ದರ್ಶನ್
ತಂದೆ /ಗಂಡನ ಹೆಸರು : ರಂಗರಾಜು
ವಯಸ್ಸು : 42
ಉದ್ಯೋಗ : ಯೋಗ ಶಿಕ್ಷಕರು
ವಾಸ ಸ್ಥಳ : ಬೆಂಗಳೂರು

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿಃ **03.10.2023**

ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ

ಪಿರ್ಯಾದಿ ನನ್ನ ತಂದೆ. ನನಗೆ ಆರೋಪಿಗಳ ಪರಿಚಯ ಇರುತ್ತದೆ. ನನ್ನ ತಂದೆ ಆರೋಪಿಗಳಿಗೆ ಸೇರಿದ ನಲ್ಲೂರು ಗ್ರಾಮದ ಜಮೀನಿನಲ್ಲಿ ಸುಮಾರು ಒಂದು ಎಕ್ರೆಯನ್ನು 4 ಲಕ್ಷ ರೂ.ಗಳಿಗೆ ಖರೀದಿ ಮಾಡಿರುತ್ತಾರೆ. ಅದರಂತೆ ಕ್ರಯದ ಕರಾರು ಪತ್ರವು ಸಹ ಆಗಿರುತ್ತದೆ ಆ ಸಂಧರ್ಭದಲ್ಲಿ ಮುಂಗಡ ಹಣವಾಗಿ 3 ಲಕ್ಷ ಸಹ ನೀಡಲಾಗಿರುತ್ತದೆ. ಸದ್ರಿ ಕ್ರಯದ ಕರಾರು ಪತ್ರಕ್ಕೆ ನಾನು ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಕ್ರಯದ ಕರಾರು ಪತ್ರವಾದ ನಂತರ ನಾವು ಸದ್ರಿ ಜಮೀನಿನ ಬಳಿ ಹೋದಾಗ, ವಿರೂಪಾಕ್ಷ ಎಂಬುವರು ಸದ್ರಿ ಜಮೀನಿನ ಬಳಿ ಇದ್ದು, ಅವರು ಸದ್ರಿ ಜಮೀನನ್ನು ಕ್ರಯಕ್ಕೆ ಆರೋಪಿಗಳಿಂದ ಪಡೆದುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಮತ್ತು ದಾಖಲೆಯನ್ನು ತೋರಿಸಿರುತ್ತಾರೆ. ಆರೋಪಿಗಳಿಗೆ ಅದರ ಬಗ್ಗೆ ಕೇಳಲಾಗಿ ಅವರು ಜವಾಬು ನೀಡಿರುವುದಿಲ್ಲ. ಆರೋಪಿಗಳು ಮೊದಲೆ ಮಾರಾಟ ಮಾಡಿದ ಜಮೀನಿನ ಸಂಬಂಧ ನಮಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ, ಆ ಕಾರಣ ನಮಗೆ ನಷ್ಟ ಉಂಟಾಗಿರುತ್ತದೆ ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಸಾಕ್ಷಿಯು ಕ್ರಯದ ಕರಾರು ಪತ್ರವನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಅರೋಪಿಗಳನ್ನು ನೋಡಿ ಅವರುಗಳೆ ಕ್ರಯದ ಕರಾರನ್ನು ಮಾಡಿಕೊಂಡು ಮೋಸ ಮಾಡಿರುವುದಾಗಿ ಗುರುತು ಹಿಡಿದಿರುತ್ತಾರೆ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.

ಪ್ರ ದ ನ್ಯಾ ದಂ, ಕುಶಾಲನಗರ.